# ತತ್ವಪದಕಾರ್ತಿಯರ ಗುರು-ಶಿಷ್ಯ ಸಂಬಂಧ

**ಈರಪ್ಪ ಪೂಜಾರ**

ಉಪನ್ಯಾಸಕರು, ಶ್ರೀ. ಕಾಡಸಿದ್ಧೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಎಚ್.ಎಸ್. ಕೋತಂಬ್ರಿ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ.

**DOI: https://doi.org/10.5281/zenodo.18775371**

## ABSTRACT:

ಕರ್ನಾಟಕದ ಮಹಿಳಾ ತತ್ವಪದಕಾರ್ತಿಯರ ಸಾಹಿತ್ಯ-ಸಾಧನೆಯಲ್ಲಿ ಗುರು-ಶಿಷ್ಯ ಸಂಬಂಧವು ಪ್ರಮುಖ ಆಧ್ಯಾತ್ಮಿಕ ಕೇಂದ್ರಬಿಂದು ಮತ್ತು ಅರಿವಿನ ಚೇತನ. ಇವರಿಗೆ ಗುರುವು ಕೇವಲ ಬೋಧಕನಲ್ಲ; ಬದಲಾಗಿ ಜ್ಞಾನ, ಮುಕ್ತಿ, ದೀಕ್ಷೆ, ಭಾವಪರಿವರ್ತನೆ ಮತ್ತು ಆತ್ಮಸ್ವರೂಪದ ಅರಿವನ್ನು ನೀಡುವ ಪರಮಚೇತನವಾಗಿ ಕಂಡುಬಂದಿದ್ದಾನೆ. ನಾಥಪಂಥ, ಸೂಫಿಪಂಥ, ಅವಧೂತ, ಶರಣಪಂಥ, ವೀರಶೈವ ತತ್ವಾನುಸಂಧಾನಗಳ ಪ್ರಭಾವದಲ್ಲಿ ಬೆಳೆದ ಇವರ ಕೃತಿಗಳು ಅನುಭಾವಾಶ್ರಯ ಮತ್ತು ಅನುಸಂಧಾನಾಶ್ರಯವಾದ ಆಧ್ಯಾತ್ಮಿಕ ಮಾರ್ಗವನ್ನು ಬಿಂಬಿಸುತ್ತವೆ.

ತುರುವಿಕೆರೆ ವೀರದಾಸಮ್ಮ, ಜತ್ತದ ಶಿವಲಿಂಗವ್ವ, ರಾಯಚೂರಿನ ಹನುಮಂತವ್ವ, ಹುಬ್ಬಳ್ಳಿಯ ವಂಗಿ ಚಂದ್ರಮ್ಮ, ಬಿದನೂರಿನ ಗಂಗಮ್ಮ, ಯನಗುಂಟಿ ವೀರಮ್ಮ, ಗೂಡೂರು ತುಳುಜಾಬಾಯಿ, ಮಥುರಾಬಾಯಿ ಮೊದಲಾದ ತತ್ವಪದಕಾರ್ತಿಯರಿಗೆ ಗುರುವು ಕೆಲವೊಮ್ಮೆ ತಂದೆ-ತಾಯಿ-ಗಂಡ-ಸ್ನೇಹಿತ-ತಂಗಿ ಎಂಬ ಲೌಕಿಕ ರೂಪಗಳಲ್ಲಿ ವ್ಯಕ್ತಗೊಂಡಿದ್ದರೂ, ಅಂತಿಮವಾಗಿ 'ಅರಿವು' ಎಂಬ ಅಲೌಕಿಕ ರೂಪಕ್ಕೆ ಏರಿದ್ದಾನೆ. ದೀಕ್ಷೆ, ಗುರುಬೋಧೆ, ಗುರೂಪದೇಶ ಮತ್ತು ಶರಣಾಗತಿಯ ಮೂಲಕ ಗುರುವು ಶಿಷ್ಯೆಯ ಬದುಕಿನ ಜಾತಿ, ಲಿಂಗ, ಸಂಪ್ರದಾಯ, ವಿಧವೆತನ ಮತ್ತು ಸಾಮಾಜಿಕ ನಿರ್ಬಂಧಗಳನ್ನು ಕರಗಿಸಿ, ಆಧ್ಯಾತ್ಮಿಕ ಸ್ವಾವಲಂಬನೆಗೆ ದಾರಿ ಮಾಡಿಕೊಟ್ಟಿದ್ದಾನೆ.

ಇವರ ತತ್ವಪದಗಳು ಗುರುದರ್ಶನದಿಂದ ಪಡೆದ ಭಾವಾನುಭವವನ್ನು ಕಾವ್ಯ, ಭಜನೆ ಮತ್ತು ವಚನಶೈಲಿಯ ಮೂಲಕ ವ್ಯಕ್ತಪಡಿಸುತ್ತವೆ. ಬದುಕಿನ ನೋವು, ದುಃಖ, ದೇಹ-ಮನಸ್ಸಿನ ಬಯಕೆಗಳು, ಲೌಕಿಕ ಬಂಧನ ಮತ್ತು ಸಾಮಾಜಿಕ ಚಿತ್ರಣಗಳ ನಡುವೆ ಗುರುಸ್ವರೂಪವು ವಿಮೋಚನೆಯ ಬಿಂಬವಾಗಿ ಹೊಳೆಯುತ್ತದೆ. ಹೀಗಾಗಿ ಮಹಿಳಾ ತತ್ವಪದಕಾರ್ತಿಯರ ಪರಂಪರೆಯಲ್ಲಿ ಗುರು-ಶಿಷ್ಯ ಸಂಬಂಧವು ಆತ್ಮಾನ್ವೇಷಣೆ, ಆತ್ಮಜ್ಞಾನ ಮತ್ತು ಜೀವನ್ಮುಕ್ತಿಯ ಸಾಧ್ಯತೆಯನ್ನು ಬಲಪಡಿಸುವ ಆಧ್ಯಾತ್ಮಿಕ ಅಕ್ಷವಾಗಿ ಮೌಲ್ಯೀಕರಿಸಬಹುದು.

## KEYWORDS:

ತತ್ವಪದಕಾರ್ತಿಯರು, ದೀಕ್ಷೆ, ಗುರುಬೋಧೆ, ಅನುಭಾವ, ನಾಥ, ಅವಧೂತ, ಪರಂಪರೆ.

ವಚನಕಾರರು ತಮ್ಮ ವಚನ ಭಂಡಾರದಲ್ಲಿ 'ಅರಿವೇ ಗುರು' ಎನ್ನುವಂತೆ ಗುರು ಎನ್ನುವುದು 'ಅರಿವಿನ' ಸಂಕೇತವಾಗಿದೆ. ಮನುಷ್ಯನಲ್ಲಿ ಅರಿವು ಜಾಗೃತಗೊಂಡಾಗ ಅವನು ಸಹಜವಾಗಿ ನಿಜಮಾರ್ಗದಲ್ಲಿ ನಡೆಯುತ್ತಾನೆ. ಹಾಗಾಗಿ ಅರಿವೇ ಗುರುವಿನ ರೂಪವಾಗಿದೆ, ಅರಿವೇ ನಿಜಾನಂದವನ್ನು ಪಡೆಯುವ ಮಾರ್ಗವಾಗಿದೆ. ಸಾಧನೆಯ ಮಾರ್ಗದಲ್ಲಿ ಮುಕ್ತಿಯನ್ನು ಪಡೆಯಲು ಗುರುವಿನ ಉಪದೇಶ, ಗುರುವಿನ ಮಾರ್ಗದರ್ಶನ ಅವಶ್ಯವಾಗಿದೆ. ಬಸವಣ್ಣನವರು ತಮ್ಮ ಒಂದು ವಚನದಲ್ಲಿ 'ಹರಮುನಿದರೂ ಗುರು ಕಾಯುವನು' ಎನ್ನುವಂತೆ ಶಿಷ್ಯನನ್ನು ಸನ್ಮಾರ್ಗದತ್ತ ಕರೆದೊಯ್ಯುವವನೇ ನಿಜವಾದ ಗುರುವಾಗಿದ್ದಾನೆ. "ಸಾಧಕರ ನಿಜವಾದ ಯಾನ ಶುರುವಾಗುವುದು ಗುರು ಮತ್ತು ಗುರು ಮಾರ್ಗದ ಹುಡುಕಾಟದ ಮೂಲಕ. 'ಲಾಯಕ್ ಗುರುಕೊ ಜಬ್ ಡೂಂಡಲಾಕೆ ಏನ ಬೇಡಿದ್ದು ಕೊಡಬೇಕಲ್ಲ' ಎಂಬ ಚೆನ್ನೂರು ಜಲಾಲಸಾಹೇಬರ ಮಾತಲ್ಲಿ ಸಮರ್ಥ ಗುರುವನ್ನು ಹುಡುಕಿಕೊಳ್ಳಬೇಕೆಂಬ ಸ್ಪಷ್ಟ ಸೂಚನೆಯಿದೆ." ಈ ಹುಡುಕಾಟದ ಮಾರ್ಗದಲ್ಲಿ ಸಮರ್ಥ ಗುರುವಿನ ಭೇಟಿಯಿಂದಾದ ಹರ್ಷವೂ ಇದೆ, ಅಸಮರ್ಥ ಗುರುವಿನ ಭೇಟಿಯ ನಿರಾಶೆಯೂ ಇದೆ. ಈ ಹುಡುಕಾಟವು ಕೇವಲ ಶಿಷ್ಯರ ಪಾಡಷ್ಟೇ ಅಲ್ಲ, ತಕ್ಕ ಶಿಷ್ಯರಿಗಾಗಿ ಕಷ್ಟಪಡುವ ಗುರುಗಳ ಕಥೆಯೂ ಆಗಿದೆ. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎನ್ನುವ ಹಾಗೆ ಶಿಷ್ಯತ್ವವನ್ನು ಗುರುಸೇವೆ ಮಾಡಿ ಪಡೆದವರೂ ಇದ್ದಾರೆ, ಗುರು ಒಡ್ಡಿದ ಸ್ಪರ್ಧೆಯಲ್ಲಿ ಗೆದ್ದು ಪಡೆದವರೂ ಇದ್ದಾರೆ.

ಜನಸಾಮಾನ್ಯರ ಜೀವನದಲ್ಲಿ ಬಹಳ ಹಿಂದಿನಿಂದಲೂ ಉಳಿದುಕೊಂಡು ಬಂದಿರುವ ಗುರುಪರಂಪರೆಗೆ ತನ್ನದೇ ಆದ ಮಹತ್ವವಿದೆ. ಸಾಧನೆಯ ಮಾರ್ಗದಲ್ಲಿ ಗುರುವನ್ನು ಹುಡುಕಿಕೊಳ್ಳುವಾಗ ಅಥವಾ ಶಿಷ್ಯನನ್ನು ಕಂಡುಕೊಳ್ಳುವಾಗ ಯಾವುದೇ ರೀತಿಯ ಜಾತಿ, ಮತ, ಪಂಥಗಳು ಲೆಕ್ಕಕ್ಕೆ ಬರುವುದಿಲ್ಲ. ಗುರುವಿನಲ್ಲಿ ಯಾವುದೇ ರೀತಿಯ ಮೋಹವೂ ಇರುವುದಿಲ್ಲ. ಶಿಷ್ಯನಾಗಬಯಸುವವನ ಎಲ್ಲ ಬಂಧನಗಳನ್ನು ಹೋಗಲಾಡಿಸಿ ತತ್ವ, ಸಿದ್ಧಾಂತ, ಗುರೂಪದೇಶ, ಗುರುಬೋಧೆಗಳನ್ನು ನೀಡಿ ನೀನೇ ಪರಮಾತ್ಮನೆಂದು ತಿಳಿಸುತ್ತಾನೆ. ಹೀಗಿರುವಾಗ ಗುರು-ಶಿಷ್ಯ ಸಂಬಂಧದಲ್ಲಿ ಮೊದಲ ಆದ್ಯತೆ ಗುರುವಿನ ಮಹಿಮೆಯನ್ನು ಅರ್ಥ ಮಾಡಿಕೊಳ್ಳುವಂತಹ ಶಿಷ್ಯನದಾಗಿದೆ. ಒಬ್ಬ ಒಳ್ಳೆಯ ಶಿಷ್ಯ ಸಿಗದೆ ಹೋದರೂ ಚಿಂತೆಯಿಲ್ಲ, ಕೆಟ್ಟ ಶಿಷ್ಯನ ಸಹವಾಸ ಬೇಡ ಎನ್ನುವುದು ಗುರು ಮಾರ್ಗದ ತಿರುಳಾಗಿದೆ.

"ತತ್ವಪದಕಾರ್ತಿಯರೆಲ್ಲರೂ ಗುರುಶಿಷ್ಯ ಪರಂಪರೆಯವರು. ಗುರುವಿನಿಂದ ದೀಕ್ಷೆ ಪಡೆದು ಸಾಧನೆಯ ಹಾದಿ ಹಿಡಿದವರು. ಆ ಗುರುವು ಪುರುಷನೇ ಆಗಿದ್ದಾನೆ. ತತ್ವಪದಕಾರ್ತಿಯರಲ್ಲಿ ಶಿಷ್ಯ ಪರಂಪರೆಯನ್ನು ಬೆಳೆಸಿದವರು ಇದ್ದಾರೆ. ಶಿವಲಿಂಗವ್ವ ಜತ್ತ ಪರಂಪರೆಯು ಬಿಜಾಪುರದಲ್ಲಿ ಪ್ರಚಲಿತವಿದೆ." ಹೀಗಾಗಿ ಇವರ ತತ್ವಪದಗಳಲ್ಲಿ ಗುರುವಿನ ರೂಪ, ಗುರುವಿನ ಕರುಣೆ ಮತ್ತು ಗುರುವಿನ ಉದ್ದೇಶದ ಫಲ ಎಲ್ಲವನ್ನು ಗಣನೀಯವಾಗಿ ನೋಡಬಹುದು. ಶರಣಮಾರ್ಗ, ನಾಥಪಂಥ, ಸೂಫಿಪಂಥ,

ಅವಧೂತ, ವೀರಶೈವ ತತ್ವಾನುಸಂಧಾನದ ಮೂಲಕ ತತ್ವಪದಕಾರ್ತಿಯರು ಪ್ರಭಾವ ಹೊಂದಿದ್ದಾರೆ. ತುರುವಿಕೆರೆ ವೀರದಾಸಮ್ಮ, ಜತ್ತದ ಶಿವಲಿಂಗವ್ವ, ಬಿದನೂರಿನ ಗಂಗಮ್ಮ, ರಾಯಚೂರಿನ ಹನುಮಂತವ್ವ, ಹುಬ್ಬಳ್ಳಿಯ ವಂಗಿ ಚಂದ್ರಮ್ಮ, ಮೈಸೂರಿನ ಹಸನ್ ಮಾತಾಜಿ, ದೇವಣಗಾಂವದ ಸಿದ್ದಲಿಂಗಮ್ಮ, ಗೂಡೂರು ತುಳುಜಾಬಾಯಿ, ತಿಕೋಟಿಕರ್ ಮಥುರಾಬಾಯಿ ಮತ್ತು ಬೊಮ್ಮನಹಳ್ಳಿ ಗಂಗಾಬಾಯಿ ಮೊದಲಾದವರು ತಮ್ಮ ತತ್ವಪದಗಳಲ್ಲಿ ತಮಗೆ ಪ್ರಭಾವ ಬೀರಿದ ಅವೈದಿಕ ಧಾರೆಗಳ ತತ್ವಸಿದ್ಧಾಂತಗಳು, ಗುರುಬೋಧೆ ಮತ್ತು ತಮಗೆ ದೀಕ್ಷೆ ನೀಡಿದ ಗುರುವಿನ ಚರಿತ್ರೆಯನ್ನು ಕುರಿತು ಪದ ಕಟ್ಟಿ ಹಾಡಿದ್ದಾರೆ.

ಗುರು-ಶಿಷ್ಯ ಸಂಬಂಧದ ಪ್ರಚಾರದಲ್ಲಿ ತತ್ವಪದಕಾರ್ತಿ ತುರುವಿಕೆರೆ ವೀರದಾಸಮ್ಮ ಬಹುಮುಖ್ಯ ಸಾಧಕಿಯಾಗಿದ್ದಾಳೆ. ಅಚಲ ಪರಂಪರೆಯಲ್ಲಿ ಕೋಲಾರದ ನಾರಾಯಣತಾತ ಪ್ರಮುಖರಾದರೆ, ಅವರ ಖಾಸಾ ಶಿಷ್ಯರು ರಾಮಾವಧೂತರಾಗಿದ್ದಾರೆ. ರಾಮಾವಧೂತರ ಆತ್ಮೀಯ ಶಿಷ್ಯಬಳಗದಲ್ಲಿ ವೀರದಾಸಮ್ಮ ಪ್ರಮುಖ ಪಾತ್ರ ವಹಿಸಿದ್ದಾಳೆ. ಅವಧೂತಳಾಗಿದ್ದ ವೀರದಾಸಮ್ಮನ ಬಗೆಗೆ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲವಾದರೂ ಇವಳ ಕುರಿತ ಕಥೆಗಳು ಭಕ್ತಿ ಪರಿಸರದಲ್ಲಿ ಸಾಕಷ್ಟು ಹರಿದಾಡಿವೆ ಹಾಗೂ ವೀರದಾಸಮ್ಮನ ಶಿಷ್ಯ ಬಳಗವು ಅಪಾರವಾಗಿದೆ.

ಶಿಶುನಾಳ ಶರೀಫರು ಗುರುವನ್ನು ಗಂಡನೆಂದು ತಿಳಿದು 'ನನ್ನೊಳಗ ನಾ ತಿಳಕೊಂಡೆ ನನಗೆ ಬೇಕಾದ ಗಂಡನ್ನ ಮಾಡಿಕೊಂಡೆ' ಎಂದು ಹಾಡಿದಂತೆ ವೀರದಾಸಮ್ಮ ಮತ್ತು ರಾಮಾವಧೂತರ ಗುರು-ಶಿಷ್ಯ ಸಂಬಂಧ ಗಂಡ-ಹೆಂಡತಿ, ಅಕ್ಕ-ತಂಗಿ, ತಂದೆ-ಮಗಳು ಹೀಗೆ ಏನೆಲ್ಲಾ ಲೌಕಿಕ ಉಪಾಧಿಗಳನ್ನು ಒಳಗೊಂಡಿತ್ತು. ಇವರಿಬ್ಬರ ಅಲೌಕಿಕಾನುಸಂಧಾನದ ಸಂಭಾಷಣೆಯಲ್ಲಿ ರಾಮಾವಧೂತರು (ಗುರು) ತಂಗಿಯಾದರೆ-ವೀರದಾಸಮ್ಮ (ಶಿಷ್ಯೆ ) ಅಕ್ಕನಾಗಿ ಚರ್ಚಿಸಿದ ಬಗೆ ಹೀಗಿದೆ.

**"ತಂಗಿ: ಇಹಲೋಕ ಭೋಗವೆಂಥ ಹೀನವಾದುದೋ ಅಕ್ಕಳೆ?**
**ಅಕ್ಕ: ಮಹಾಲೋಕ ಏಕವಾದೊಡೆ ಸವಿದು ಹೋಗುವುದೇ ತಂಗಿಯೇ.**
**ಅಕ್ಕ: ಅದರ ಮಾರ್ಗ ತಿಳಿದಿದ್ದರೆ ಮರೆಯಾತಕೆ ತಂಗಿಯೆ?**
**ತಂಗಿ: ಆಗಿ ಹೋದ ಮಾತಿನಿಂದದು ಕಾಣದಾದುದೇ ಅಕ್ಕಳೇ?**
**ಅಕ್ಕ: ಮಾಯ ಮತಗಳು ತಿರುಗಿಬಾರದ ಮಾರ್ಗವಾವುದು ತಂಗಿಯೇ?**
**ತಂಗಿ: ಸ್ಮರಣೆಯಿಲ್ಲದ ಪೂರ್ಣಭಾವ ಹೊಂದಿಬಿಡೇ ಅಕ್ಕಳೇ."**

ತತ್ವಪದ ಸಾಹಿತ್ಯದ ಒಂದು ಹಂತದಲ್ಲಿ ಗುರುವು ತಂಗಿಯಾಗುವ, ಶಿಷ್ಯನೇ ಅಕ್ಕನಾಗುವ ಗಾರುಡಿ ಗಮ್ಮತ್ತು ರಾಮಾವಧೂತರು ಮತ್ತು ವೀರದಾಸಮ್ಮನ ಮೂಲಕ ಅನುಭಾವ ಲೋಕದಲ್ಲಿ ಹೊಸ ಅಲೆಯನ್ನು ಸೃಷ್ಟಿಸಿದೆ. ಗುರುಶಿಷ್ಯರಿಬ್ಬರೂ ಏಕವಾಗಿ ಅದ್ವಯವಾಗುವ ವಿಧಾನವನ್ನು ವೀರದಾಸಮ್ಮನಂತೆ ಇನ್ನೊಬ್ಬ ತತ್ವಪದಕಾರ್ತಿ ವಿವರಿಸಲಾಗಿಲ್ಲ. ರಾಮಾವಧೂತರೊಂದಿಗಿನ ಅವಳ ಸಂಬಂಧ ಲೋಕದ ಉಪಾಧಿಗಳನ್ನು ಮೀರಿದೆ. ಲೋಕವಾಸನೆಯಲ್ಲಿ ಮುಳುಗಿದ ಮನಸ್ಸನ್ನು ಗುರುವಿನಲ್ಲಿ

ಇರಿಸಿದರೆ ಗುರುವು ಶಿಷ್ಯನನ್ನು ವಿಷಯ ವಾಸನೆಯಿಂದ ಮುಕ್ತನನ್ನಾಗಿಸಿ ಗುರುಬೋಧೆಯ ಹೊಳೆ ಹರಿಸಿ ಸದಾ ಆನಂದದಲ್ಲಿ ತೇಲಿಸುತ್ತಾನೆ. ವೀರದಾಸಮ್ಮ ತನ್ನ ಇನ್ನೊಂದು ಪದದಲ್ಲಿ “ರಾಮಾವಧೂತನಂಥ ಕೋಮಲ ಗುರುವಿನ ಅಗಲಿರಲಾಗದು. ಆತ ಸಂಪೂರ್ಣ ಪ್ರೇಮಮಯಿ. ಅಂಥ ಗುರುವಿನಲ್ಲಿ ಬೆರೆಯದೇ ಎಲ್ಲೆಲ್ಲೋ ಅಲೆದಾಡುವ ಹುಚ್ಚು ಮನಸ್ಸನ್ನು ನಾಯಿಯಂತೆ ಸಾಕಿ ಗುರುಭಕ್ತಿ ದೃಢದಲ್ಲಿ ಕಟ್ಟಿ ಪಾಲಿಸಬೇಕು” ಎಂದು ಹಾಡುತ್ತಾ ತನ್ನ ಗುರುವಿನ ಬಗೆಗೆ ಅವಳಿಗಿರುವ ಕೋಮಲ ಭಕ್ತಿಯನ್ನು ತಿಳಿಸುತ್ತಾಳೆ.

ತತ್ವಪದ ಸಾಹಿತ್ಯದಲ್ಲಿ ಗಂಡ ಎಂದರೆ ‘ದೀಕ್ಷಾ ಗುರುವೇ’ ಆಗಿದ್ದಾನೆ. ಸಾಮಾನ್ಯವಾಗಿ ಗುರುವು ಪುರುಷನೇ ಆಗಿರುತ್ತಾನೆ. ಆದರೆ ಇಲ್ಲಿ ತತ್ವಪದಕಾರ್ತಿ ರಾಯಚೂರಿನ ಹನುಮಂತವ್ವನಿಗೆ ‘ವೆಂಕಮ್ಮಾವಧೂತೆ’ ಎಂಬ ಮಹಿಳಾ ಸಾಧಕಿ ಗುರುವಾಗಿದ್ದು ಮತ್ತು ಅವಳನ್ನು ಪುಲ್ಲಿಂಗವಾಚಕವಾಗಿಯೇ ಕರೆದದ್ದು ಮುಖ್ಯವಾದ ಸಂಗತಿಯಾಗಿದೆ. ಕಾರಣ ಅವಧೂತ ಪರಂಪರೆಯಲ್ಲಿ ಸ್ತ್ರೀಯರೂ ಗುರುತ್ವ ಪಡೆದು ಗುರುಬೋಧೆ ನೀಡಬಹುದಿತ್ತು. ಹನುಮಂತವ್ವನನ್ನು ರಾಯಚೂರಿನ ಚಿಕ್ಕ ವ್ಯಾಪಾರಿ ‘ಪಲ್ಲುಗ ನಾಗಯ್ಯ’ ಎಂಬುವವನಿಗೆ ಕೊಟ್ಟು ವಿವಾಹ ಮಾಡಲಾಗಿತ್ತು. ಮಧುರ ದಾಂಪತ್ಯದ ಫಲವೆಂಬಂತೆ ದಂಪತಿಗಳಿಗೆ ಐದು ಜನ ಮಕ್ಕಳು ಜನಿಸುತ್ತಾರೆ. ದುರಂತವೆಂದರೆ ಹುಟ್ಟಿದ ಐದು ಮಕ್ಕಳಲ್ಲಿ ಒಂದೂ ಕೈಗೆ ದಕ್ಕದೆ ಎಲ್ಲವೂ ಶಿವನ ಪಾದ ಸೇರಿದ್ದವು. ಇದು ಹನುಮಂತವ್ವನ ಬದುಕಿನಲ್ಲಿ ನುಂಗಲಾರದ ತುತ್ತಾಗಿ ದುಃಖದ ಕೂಪಕ್ಕೆ ತಳ್ಳುತ್ತದೆ. ಹೀಗಾಗಿ ವೆಂಕಮ್ಮಾವಧೂತೆಯನ್ನು ಗುರುವಾಗಿ ಸ್ವೀಕರಿಸಿ ಲೌಕಿಕ ಬದುಕಿನಿಂದ ದೂರವಾಗಲು ಪತಿಗೆ ಸ್ವತಃ ತಾನೇ ಮುಂದೆ ನಿಂತು ಮತ್ತೊಂದು ಮದುವೆ ಮಾಡುತ್ತಾಳೆ. ಆಗ ವೆಂಕಮ್ಮಾವಧೂತೆಯಿಂದ ಗುರುಬೋಧೆ ಪಡೆದ ಹನುಮಂತವ್ವ ಸಂಪೂರ್ಣವಾಗಿ ಲೌಕಿಕ ಸಂಸಾರವನ್ನು ತೊರೆದು ಆಧ್ಯಾತ್ಮಿಕ ವಲಯಕ್ಕೆ ಸೇರಿಕೊಂಡಳು. ಆ ಮೂಲಕ ತಾನು ಸ್ವತಂತ್ರಳೆಂದು ಭಾವಿಸಿ ಪೂರ್ತಿ ಮನೆಯನ್ನು ತೊರೆದು ಆಶ್ರಮವಾಸಿಯಾಗುತ್ತಾಳೆ.

ಇದೇ ಸಂದರ್ಭಕ್ಕೆ ಗುರು ವೆಂಕಮ್ಮಾವಧೂತೆ ಮರಣ ಹೊಂದುತ್ತಾಳೆ. ಆಗ ಚಾಗಿಯ ಭಕ್ತರು ವೆಂಕಮ್ಮಾವಧೂತೆಯ ಸಮಾಧಿಯನ್ನು ತಮ್ಮೂರಿನಲ್ಲೇ ಮಾಡಲು ನಿರ್ಧರಿಸಿದಾಗ, ವೆಂಕಮ್ಮಾವಧೂತೆಯು ತನ್ನ ಬದುಕಿನ ಹೆಚ್ಚು ಸಮಯವನ್ನು ಗುರು ಭೀಮಾರ್ಯರ ಆಶ್ರಮದಲ್ಲಿ ಕಳೆದಿದ್ದಾಳೆ. ಆದ್ದರಿಂದ ಗುರು ಭೀಮಾರ್ಯರ ಸಮಾಧಿಯ ಪಕ್ಕದಲ್ಲೇ ವೆಂಕಮ್ಮಾವಧೂತೆಯ ಸಮಾಧಿಯಾಗಬೇಕೆಂದು ಒತ್ತಾಯಿಸಿ ಅದನ್ನು ಕಾರ್ಯರೂಪಕ್ಕೆ ತರುತ್ತಾಳೆ. ಅಷ್ಟೇ ಅಲ್ಲದೆ ಮುಂದೆ ಅವರ ಗದ್ದುಗೆಯ ಉಸ್ತುವಾರಿ ವಹಿಸಿಕೊಂಡು ಆಶ್ರಮದಲ್ಲಿ ಆಧ್ಯಾತ್ಮಿಕ ಸಾಧನೆಗೈಯುತ್ತಾಳೆ. ಅಲ್ಲದೆ ಗುಪ್ತಸಾಧಕಿಯಾಗಿ ನೂರಾರು ತತ್ವಪದಗಳನ್ನು ಮತ್ತು 207 ಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದಾಳೆ. ಇಲ್ಲಿ ತನ್ನ ವಚನಗಳಲ್ಲಿ ಗುರು ವೆಂಕಮ್ಮಾವಧೂತೆಯ ನಾಮವನ್ನೇ ಅಂಕಿತವಾಗಿಟ್ಟುಕೊಂಡು ‘ಗುರುವೆಂಕಟೇಶ’ ಎಂಬ ಅಂಕಿತದೊಂದಿಗೆ ವಚನಗಳ ರಚನೆ ಮಾಡಿದ್ದು ಹನುಮಂತವ್ವ ಮತ್ತು ವೆಂಕಮ್ಮಾವಧೂತೆಯರ ಗುರು-ಶಿಷ್ಯ

ಸಂಬಂಧಕ್ಕೆ ಹಿಡಿದ ಕನ್ನಡಿಯಾಗಿದೆ.

**"ಎಂಥ ಬೋಧಕ ಎನ್ನ ಗುರುವು**
**ಚಿಂತಿಯ ನೀಗಿಸಿದಾ ಒಲಿದು**
**ಅಂತರಂಗ ಬಹಿರಂಗವೆಂಬುವ ವ್ಯಾಧಿ**
**ಮಂತ್ರ ಸ್ವರೂಪಮಯ ಮಾಡಿ ತೋರಿ ನಿಜದ ಅರಿವು"**

ಇದು ಹುಬ್ಬಳ್ಳಿಯ ವಂಗಿ ಚಂದ್ರಮ್ಮನ ಪದವಾಗಿದೆ. ಬಾಲ್ಯದಲ್ಲಿಯೇ ಮದುವೆಯಾಗಿ ಗಂಡನು ಕ್ಷಯರೋಗಕ್ಕೆ ತುತ್ತಾಗಿ ಸಾವನ್ನಪ್ಪಲು ಕೇಲೂರಿನ ಮಠಾಧೀಶರಾದ ಮಂಟಯ್ಯ ಸ್ವಾಮಿಗಳು ಚಂದ್ರಮ್ಮನನ್ನು ಲೌಕಿಕ ಬದುಕಿನ ಎಲ್ಲ ಜಂಜಡಗಳಿಂದ ಮುಕ್ತವಾಗಿಸಿ ಶಿವದೀಕ್ಷೆ ನೀಡುತ್ತಾರೆ. ಗುರುಕರುಣೆಯೊಂದಿಗೆ ಚಂದ್ರಮ್ಮ ಪಾರಮಾರ್ಥವನ್ನು ಪಡೆದುಕೊಂಡ ತನ್ನಂತೆಯೇ ಇರುವ ಅನೇಕ ಮಹಿಳೆಯರನ್ನು ಒಟ್ಟುಗೂಡಿಸಿ ಅಕ್ಕನ ಬಳಗ ಕಟ್ಟುತ್ತಾಳೆ. ಚಂದ್ರಮ್ಮನಂಥವರಿಗೆ ಅಕ್ಕಮಹಾದೇವಿ ಆದರ್ಶವಾಗಿದ್ದಾಳೆ. ಹೀಗೆ ಅಕ್ಕನ ಬಳಗದೊಂದಿಗೆ ಶಾಸ್ತ್ರ, ಭಜನೆ, ಚರ್ಚಾಗೋಷ್ಠಿ, ಸಂಗೀತ, ಪೂಜೆ, ಆಚರಣೆ ಮತ್ತು ಮನೆ ಮಂದಿಯ ಸೇವೆಗಳಲ್ಲಿ ತಲ್ಲೀನಳಾಗಿರುವಾಗ ಚಂದ್ರಮ್ಮನ ಆರಾಧ್ಯ ಗುರು ಕೇಲೂರು ಮಂಟಯ್ಯ ಸ್ವಾಮಿಗಳು ಮರಣಿಸುತ್ತಾರೆ. ಈ ಸುದ್ದಿ ಅವಳಿಗೆ ಆಘಾತವನ್ನುಂಟು ಮಾಡುತ್ತದೆ. ಈ ಸಂದರ್ಭದಲ್ಲಿ ಗುರುವಿನ ಅಗಲಿಕೆಯ ತಾಪದಲ್ಲಿ ಶಿಷ್ಯಳೊಬ್ಬಳ ಹಾಡಿದ ಶೋಕಗೀತೆ ಇದಾಗಿದೆ. ಗುರುವಿನೊಂದಿಗಿನ ಅನ್ಯೋನ್ಯತೆ, ಆತನಿಂದ ಬದುಕಿನಲ್ಲಿ ಕಂಡುಕೊಂಡ ಅರ್ಥ, ತನ್ನ ದಯನೀಯ ಸ್ಥಿತಿ ಮೊದಲಾದವುಗಳನ್ನು ಸ್ವಭಾವೋಕ್ತಿಯ ನೆಲೆಯಲ್ಲಿ ಹಾಡಾಗಿ ಹರಿಸಿದ್ದಾಳೆ.

**"ಪೂರ್ವದ ಹಾದಿ ಕಡೀದನ**
**ಪುನರಪಿ ಬೋಧಾ ಹೇಳಿದನ**
**ಮನಸಿನ ಮೈಲಿಗೆ ಬಿಡಿಸಿದನ**
**ಕನಸಿನ ಎಚ್ಚರ ಮರಸಿದನ**
**ಮೆಚ್ಚು ಮಾಡಿ ಹುಚ್ಚ ಹಿಡಿಸಿದನ**
**ಸತ್ಯ ಸದ್ಗುರು ವಿರೂಪಾಕ್ಷನ"**

ಇದು ಬಿದನೂರಿನ ಗಂಗಮ್ಮನ ಪದವಾಗಿದೆ. ತತ್ವಪದಕಾರ್ತಿ ಬಿದನೂರಿನ ಗಂಗಮ್ಮ ಮೂಲತಃ ವಿಜಯಪುರದ ಇಂಡಿ ತಾಲ್ಲೂಕಿನ ನಾಗಠಾಣಾ ಎಂಬ ಗ್ರಾಮದ ಲಿಂಗಾಯತ ಗಾಣಿಗೇರ ಮನೆತನದಲ್ಲಿ ಜನಿಸಿದವಳು. ಆಗಿನ ಸಂಪ್ರದಾಯದಂತೆ ಬಾಲ್ಯದಲ್ಲಿಯೇ ಮದುವೆಯಾಗಿ ಸ್ವಲ್ಪ ದಿನಗಳಲ್ಲೇ ಗಂಡನನ್ನು ಕಳೆದುಕೊಂಡು ನಾಗಠಾಣಾದಲ್ಲಿ ಬರಗಾಲ ಬೀಳಲು ತನ್ನ ಮುಪ್ಪಿನ ತಂದೆಯೊಂದಿಗೆ ಕಲಬುರ್ಗಿಯ ಅಫಜಲಪೂರ ತಾಲ್ಲೂಕಿನ ಬಿದನೂರಿಗೆ ಬರುತ್ತಾಳೆ. ಅಲ್ಲಿಯೇ ಕೂಲಿನಾಲಿಯೊಂದಿಗೆ ಜೀವನ ನಡೆಸಿ ಸಂಜೆಯ ಆಸರೆಗೆ ಊರ ಹೊರಗಿನ ಸನ್ಯಾಸಿ ಮಠಕ್ಕೆ ಬರುತ್ತಾಳೆ. ವರ್ಷದ ಸುಗ್ಗಿ ಮುಗಿಸಿ ತಮ್ಮೂರಿಗೆ ಮರಳಬೇಕೆನ್ನುವಲ್ಲಿ ಮುಪ್ಪಿನ ತಂದೆ ಸಾವನ್ನಪ್ಪುತ್ತಾನೆ. ಇದರಿಂದ ಆ ಮಠದ ವಿರೂಪಾಕ್ಷ ಸ್ವಾಮಿಗಳು

ಮತ್ತು ಊರಿನ ಗೌಡ ಮಲ್ಲಿಕಾರ್ಜುನಪ್ಪನು ಅವಳನ್ನು ಬಿದನೂರಿನಲ್ಲಿಯೇ ಉಳಿಯುವಂತೆ ಮಾಡುತ್ತಾರೆ.

ದಿನ ಕಳೆಯುತ್ತಿದ್ದಂತೆ ವಿರೂಪಾಕ್ಷ ಸ್ವಾಮಿಗಳ ದೃಷ್ಟಿ ಇವಳ ಮೇಲೆ ಬೀಳುತ್ತದೆ. ಪ್ರಕೃತಿ ಸಹಜ ಬಯಕೆಗಳು ಗಂಗಮ್ಮ ಮತ್ತು ವಿರೂಪಾಕ್ಷ ಸ್ವಾಮಿಗಳನ್ನು ಹತ್ತಿರಕ್ಕೆ ತರುತ್ತವೆ. ಇದರ ಫಲವಾಗಿ ಗಂಗಮ್ಮ ಗರ್ಭ ಧರಿಸುತ್ತಾಳೆ. ಇದರಿಂದ ಜನರು ಅವಳನ್ನು ಜಾರಿಣಿಯೆಂದು, ಮಠದಯ್ಯನ ಪ್ರೇಯಸಿ ಎಂದು ಕರೆದಾಗ ಗಟ್ಟಿಗಿತ್ತಿಯಾದ ಗಂಗಮ್ಮ ಇದಕ್ಕೆ ಅಂಜದೆ ತನ್ನ ಮತ್ತು ಮಠದಯ್ಯನ ಸ್ನೇಹ ಪವಿತ್ರವಾದುದು ಎನ್ನುತ್ತಾಳೆ. ವಿಧವೆ ಎಂಬ ಪಟ್ಟವಾಗಲಿ, ಸ್ವಾಮಿಯೆಂಬ ಸ್ಥಾನವಾಗಲಿ ಸಮಾಜವು ಜನರಿಗೆ ನೀಡಿರುವ ಮಿತಿಯಾಗಿದೆ. ಇದರಲ್ಲಿ ನಮ್ಮಿಬ್ಬರದು ತಪ್ಪಿಲ್ಲ. ಸಮಾಜದ ಸಂಸ್ಕಾರಗಳಿಗೆ ಬದ್ಧವಾಗಿ ತನ್ನ ಯೌವ್ವನದ ಬಯಕೆಗಳಿಗೆ ಬೀಗ ಹಾಕಿದಾಗ, ಪೂರ್ವದ ಹಾದಿ ಅಂದರೆ ವಿಧವೆ(ವೈಧವ್ಯ )ಯ ಪಟ್ಟ ಬಿಡಿಸಿ, ಜೀವನದ ಬಗೆಗಿನ ಭಯ ಭ್ರಮೆಗಳನ್ನು ಹೊಡೆದೋಡಿಸಿ ಹೊಸ (ಪುನರಪಿ) ಜೀವನ ದಾರಿ ತೋರಿದನ, ತನ್ನ ಮನಸ್ಸಿಗಂಟಿದ ಲೈಂಗಿಕತೆಯ ಮೈಲಿಗೆ ಬಿಡಿಸಿ ಪವಿತ್ರವಾದ ಪ್ರೇಮದಲ್ಲಿ ಆಸೆ ಹುಟ್ಟಿಸಿದನು. ತನ್ನ ಇರುವಂತಿಕೆಯಿಂದ ಮೆಚ್ಚು ಮಾಡಿ ಹುಚ್ಚ ಹಿಡಿಸಿದನು ಎಂದು ವಿರೂಪಾಕ್ಷ ಸ್ವಾಮಿಯನ್ನು ವಿಧ ವಿಧವಾಗಿ ವರ್ಣಿಸುತ್ತಾಳೆ. ಆ ಮೂಲಕ ಮನಸ್ಸಿನ ಮೈಲಿಗೆ ಬಿಡಿಸಿದ್ದು, ಸ್ಥಾಪಿತ ಮತೀಯ ಮೌಲ್ಯಗಳನ್ನು ಭಂಜಿಸಿದ ಕ್ರಮ, ಹೆಣ್ಣು-ಗಂಡಿನ ಕಾಮ ಪ್ರೇಮದ ನೈಜತೆಯನ್ನು ಸಾರುತ್ತಾಳೆ. ಹೀಗೆ ಇದು ತತ್ವಪದ ಲೋಕದಲ್ಲಿ ಗುರು-ಶಿಷ್ಯ ಸಂಬಂಧದ ಮತ್ತೊಂದು ಮುಖವಾಗಿದ್ದು, ಬಿದನೂರಿನ ಗಂಗಮ್ಮ ವಿರೂಪಾಕ್ಷ ಸ್ವಾಮಿಯನ್ನು ಗುರುವಾಗಿಯೂ-ಪತಿಯಾಗಿಯೂ ಸ್ವೀಕರಿಸಿ ಗುರುವಿನೊಂದಿಗಿನ ತನ್ನ ಎಲ್ಲ ಅನುಭವಗಳನ್ನು ತತ್ವಪದಗಳಲ್ಲಿ ಹಿಡಿದಿಟ್ಟಿದ್ದಾಳೆ.

**"ಗುರು ದೀಕ್ಷೆಯನ್ನು ಪಡೆದು**
**ಗುರುವಿನ ಮಗಳಾದೆ**
**ಗುರುವೆ ತಂದೆ ತಾಯಿಯೆಂದು**
**ಅರಿತು ಬದುಕಿದೆ**
**ತಾಯಿಯಿಂದ ತಂದೆಯನ್ನು**
**ಅರಿಯುವಂತೆ**
**ಗುರುವಿನಿಂದ ದೇವನಿರುವ**
**ತಾಣ ತಿಳಿಯಿತು"**

ಗುರುಮಾಹಾತ್ಮ್ಯವನ್ನು ಸಾರುವ ಈ ಪದ ಯನಗುಂಟಿ ವೀರಮ್ಮನದಾಗಿದೆ. ಲಿಂಗಾಯತ ಕುಟುಂಬದಲ್ಲಿ ಹುಟ್ಟಿದ ವೀರಮ್ಮ ಚಿಕ್ಕವಯಸ್ಸಿನಲ್ಲಿಯೇ ಬಸವಂತರಾವ ಪಾಟೀಲ ಎನ್ನುವವರನ್ನು ವಿವಾಹವಾಗುತ್ತಾಳೆ. ಚಿಕ್ಕಂದಿನಲ್ಲೇ ಗಂಡನು ಅಕಾಲ ಮರಣಕ್ಕೆ ತುತ್ತಾಗಲು ಸಂಸಾರಿಕ ಬದುಕಿನಿಂದ ವಿಮುಖಳಾಗುತ್ತಾಳೆ. ಅಂದು ಆ ಭಾಗದ ಹಾರಕೂಡ ಮಠದಲ್ಲಿ ಗುಂಡಮ್ಮ ಎಂಬಾಕೆ ಚೆನ್ನಬಸವಸ್ವಾಮಿಗಳ

ಪರಮಾಪ್ತಳಾಗಿದ್ದಳು. ಇವಳ ಶಿಷ್ಯಳೇ ಯನಗುಂಟಿ ವೀರಮ್ಮಳು. ಹಾರಕೂಡ ಮಠದಲ್ಲಿ ಗುರುಬಾಂಧವ್ಯ ಹುತ್ತಗಟ್ಟಿತ್ತು. ಅಲ್ಲಿರುವವರೆಲ್ಲ ವಿವಿಧ ಜಾತಿ, ಮತ, ಪಂಥಗಳಿಂದ ಬಂದಿದ್ದರು. ಗುಂಡಮ್ಮ ಮತ್ತು ವೀರಮ್ಮ ಚೆನ್ನಬಸವೇಶ್ವರಸ್ವಾಮಿಗಳ ಬಳಿ ಗುರುಬೋಧೆ ಪಡೆದಿದ್ದರು. ಹೀಗಾಗಿ ವೀರಮ್ಮನಿಗೆ ಬದುಕಿನ ಜಂಜಡಗಳಿಂದ ಮುಕ್ತಗೊಳಿಸಿದ ಗುರುವೇ ತಂದೆಯಾಗಿ, ತಾಯಿಯಾಗಿ, ದೇವನಾಗಿ, ತನ್ನೊಳಗಿರುವ ಅರಿವಾಗಿ ಕಂಡು ಬಂದಿದ್ದಾನೆ.

**“ಗುರೂನೆ ಮುಝೋ ಅಜಬ ದಿಖಾಯಾ**
**ದುನಿಯಾ ಸಭೀ ಖೇಲ ಸ್ವಪ್ನೋಂಕಿ ಮಾಯಾ**
**ಮುಝೋ ನಾಮಕಾ ಪ್ರೇಮ ಪ್ಯಾಲಾ ಪಿಲಾಯಾ**
**ಯಹಿ ನಾಮಸೇ ಸತ್ಯ ಸಾಕ್ಷಾತ ಕಿಯಾ”**

ಹಿಂದಿ ಭಾಷೆಯಲ್ಲಿ ರಚಿತವಾದ ಈ ಪದ ಗೂಡೂರು ತುಳುಜಾಬಾಯಿಯದಾಗಿದೆ. ಗುರುಮಹಿಮೆ ಸಾರುವ ಈ ಪದದಲ್ಲಿ ತುಳುಜಾಬಾಯಿಯ ಆತ್ಮಶಕ್ತಿ ಹಾಗೂ ಕಾವ್ಯಶಕ್ತಿಗಳೆರಡೂ ಹರಿದು ಬಂದಿವೆ. ಭೀಮಾಶಂಕರರಿಂದ ದೀಕ್ಷೆ ಪಡೆದು ಬೊಮ್ಮನಹಳ್ಳಿಯ ಸದ್ಭಾವ ಗೋಷ್ಠಿಗಳಲ್ಲಿ ಪಾಲ್ಗೊಂಡು ತತ್ವಪದಕಾರ್ತಿಯರಾಗಿ ಅರಳಿದವರು ಗೂಡೂರು ತುಳುಜಾಬಾಯಿ, ತಿಕೋಟಿಕರ್ ಮಥುರಾಬಾಯಿ ಹಾಗೂ ಬೊಮ್ಮನಹಳ್ಳಿಯ ಗಂಗಾಬಾಯಿ. ಸಾಮಾನ್ಯ ಗೃಹಿಣಿಯರಂತಿದ್ದ ಇವರಿಗೆ ಗುರುಭಕ್ತಿಯೇ ಸಾಧನೆ ಮತ್ತು ಸಿದ್ಧಿಯಾಗಿದೆ. ಗುರುಮಾರ್ಗದಲ್ಲಿ ಪ್ರಾಮಾಣಿಕತೆ ತೋರಿದ ಇವರು ಗುರುನಾಮ ಸ್ಮರಣೆಯಿಂದ ಹತ್ತಾರು ಪದ ರಚಿಸಿದ್ದಾರೆ. ಇವರು ಕನ್ನಡ, ಮರಾಠಿ ಮತ್ತು ಹಿಂದಿ ಭಾಷೆಯಲ್ಲಿಯೂ ಪದಗಳನ್ನು ರಚಿಸಿದ್ದಾರೆ.

ಹೀಗೆ ಗುರುವಿನಿಂದಲೇ ಜೀವನ್ಮುಕ್ತಿ ಎನ್ನುವಂತೆ ಮಹಿಳಾ ತತ್ವಪದಕಾರರೆಲ್ಲರೂ ಗುರುಕರುಣೆ, ಗುರುಬೋಧೆ, ಗುರೂಪದೇಶದ ಪ್ರಭಾವದಿಂದ ಗುರು-ಶಿಷ್ಯ ಎಂಬ ಅನ್ಯೋನ್ಯ ಬಂಧನಕ್ಕೆ ಒಳಗಾಗಿದ್ದಾರೆ. ಭಾರತೀಯ ಸಮಾಜದ ಸಾಂಪ್ರದಾಯಿಕ ಸ್ತ್ರೀಯ ಬದುಕಿನ ಸಂಕಟಗಳು ಅನುಭಾವ ಲೋಕದಲ್ಲಿ ಗುರುಮಾಹಾತ್ಮ್ಯದಿಂದ ನಿರಾಳವಾಗಿವೆ. ಮನುಷ್ಯ ಬದುಕನ್ನು ಗುರುವಿನೆಡೆಗೆ ತಿರುಗಿಸಿದರೆ ಮೋಕ್ಷದ ಮಾರ್ಗ ಸುಲಭವಾಗಿದೆ. ನಾಥಪಂಥ, ಸೂಫಿಪಂಥ, ಅವಧೂತ, ಶರಣಪಂಥ ಮೊದಲಾದ ಗುರುಪರಂಪರೆಗಳಲ್ಲಿ ಭಾಗಿಯಾದ ಮಹಿಳಾ ತತ್ವಪದಕಾರರು ತಮ್ಮ ನಡೆ-ನುಡಿ, ಅಭಿವ್ಯಕ್ತಿ ವಿಧಾನ, ಸಮಾಜಪರ ಚಿಂತನೆಯಲ್ಲಿ ಗುರುವಿನಿಂದಲೇ ಜಗವು, ಗುರುವಿನಿಂದಲೇ ಜೀವನವು ಎಂದಿದ್ದಾರೆ.

## ಪರಾಮರ್ಶನ ಗ್ರಂಥಗಳು:


1. ಮೀನಾಕ್ಷಿ ಬಾಳಿ (ಸಂ), (2017), ಮಹಿಳಾ ತತ್ವಪದಗಳು (ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆ, ಸಂಪುಟ–27), ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.
2. ನೀಲಾ ಕೆ. (ಸಂ), (2019), ಕನ್ನಡ ತತ್ವಪದಕಾರ್ತಿಯರ ವಾಚಿಕೆ, ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.
3. ಮೀನಾಕ್ಷಿ ಬಾಳಿ, (2019), ತತ್ವಪದ ಮತ್ತು ಮಹಿಳೆ: ಕನ್ನಡ ತತ್ವಪದಕಾರ್ತಿಯರು, ಗದಗ: ಲಡಾಯಿ ಪ್ರಕಾಶನ.
4. ರಾಜಶ್ರೀ ಕಿಶೋರ್, (2021), ಕನ್ನಡ ತತ್ವಪದಕಾರರ ಸಾಹಿತ್ಯಧಾರೆ, ಬೆಂಗಳೂರು: ವೇ. ಮೂ. ಶೇಖರಯ್ಯ ನಂದಿ ಮತ್ತು ಸಹೋದರರು.
5. ಅಮರೇಶ ನುಗುಡೋಣಿ, (2014), ತತ್ವಪದ ಸಾಹಿತ್ಯ ಅಧ್ಯಯನ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
6. ರಹಮತ್ ತರೀಕೆರೆ ಮತ್ತು ಅರುಣ್ ಜೋಳದಕೂಡ್ಲಿಗಿ (ಸಂ), (2017), ತತ್ವಪದ ಪ್ರವೇಶಿಕೆ (ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆ, ಸಂಪುಟ–1), ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.
7. ವಿವಿಧ ಲೇಖಕರು, (1993), ಕನ್ನಡ ತತ್ವಪದಕಾರರು, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.